ಕೆ ನಾಗರಾಜಪ್ಪ ಮತ್ತು ಇತರರು

ವಿರುದ್ಧ

ಹೆಚ್. ನರಸಿಂಹರೆಡ್ಡಿ.

ನಾಗರೀಕ ಮೇಲ್ಮನವಿ ಸಂಖ್ಯೆ ೫೦೩೩-೫೦೩೪/

೨೦೦೯

೦೯ ನೇ ಸೆಪ್ಟಂಬರ್ ೨೦೨೧

[ಎಲ್. ನಾಗೇಶ್ವರ ರಾವ್ ಮತ್ತು ಎಸ್. ರವಿಂದ್ರ

ಭಟ್, ನ್ಯಾಯಮೂರ್ತಿಗಳು]

ಕಲಮು ೧೦೩- ಸಂಗತಿ ಮೇಲಿನ ವಿವಾದಗಳನ್ನು ಪ್ರಶಂಸಿಸಲು ನಾ. ಪ್ರ. ಸಂ. (ನಾಗರೀಕ ಪ್ರಕ್ರಿಯಾ ಸಂಹಿತೆ) ರಡಿ ಉಚ್ಚ ನ್ಯಾಯಾಲಯಗಳ ವ್ಯಾಪ್ತಿ.

ನಿರ್ಧರಿಸಿದ್ದು: ನಾ. ಪ್ರ. ಸಂ. ಕಲಮು ೧೦೩ ರ ಅಡಿಯಲ್ಲಿ ಸೀಮಿತ ವಾಸ್ತವಿಕ ವಿಮರ್ಶೆ ಮಾಡುವ ಅಧಿಕಾರವನ್ನು ಉಚ್ಚ ನ್ಯಾಯಾಲಯಗಳು ಹೊಂದಿವೆ.—ಕಾನೂನಿನ ಗಣನೀಯ ಪ್ರಶ್ನೆಯಿಲ್ಲದಿ - ದ್ದಲ್ಲಿ , ಕೆಳ ನಾಯಾಲಯದ ನಿರ್ಣಯಗಳಲ್ಲಿ ಅಥವಾ ಸಂಗತಿಗಳ ಮೇಲಿನ ಸಮವರ್ತಿ ನಿರ್ಣಯಗಳಲ್ಲಿ ಉಚ್ಚ ನ್ಯಾಯಾಲಯಗಳು ಹಸ್ತಕ್ಷೇಪ ಮಾಡಬಾರದೆಂಬ ನಿಯಮ ಎರಡು ಮುಖ್ಯವಾದ ಮುನ್ನೆಚ್ಚರಿಕೆಗಳಿಗೆ ಒಳಪಟ್ಟಿದೆ.- **ಮೊದಲನೆಯದು**, ಸಂಗತಿಯ ಮೇಲಿನ ಅಭಿಪ್ರಾಯ ಸ್ಪಷ್ಟವಾಗಿ ವಿಕೃತವಾಗಿದ್ದರೆ ಅಥವಾ ನ್ಯಾಯಾಲಯದ ಪ್ರಜ್ಞೆಗೆ ಘಾತಕವಾಗಿದ್ದರೆ; ಬೇರೇ ರೀತಿಯಲ್ಲಿ ಹೇಳುವುದಾದರೆ, ಹಸ್ತಕ್ಷೇಪ ಸಮರ್ಥನೀಯ ಎಂದು ಕಡತಕ್ಕೆ ಒದಗಿಸಿರುವ ಸಂಗತಿಗಳಿಂದಲೇ ತರ್ಕದ ಮುಖದಂತೆ ಜಿಗಿದು ಬರುವಂತಿರಬೇಕು; **ಮತ್ತೊಂದು:**

ಸಿವಿತ ಸಂದರ್ಭಗಳಲ್ಲಿ ಸಂಗತಿ ಮೇಲಿನ ನಿರ್ಣಯಗಳು ಪರಿಶೀಲನೆಗೆ ಆಹ್ವಾನಿಸಿ ಮತ್ತು ಅಡಿಮೇಲು ಆಗಬಹುದೆಂದು ನಾ. ಪ್ರ. ಸಂ. ಕಲಮು ೧೦೩ ರ ಅಡಿಯಲ್ಲಿ ಹೇಳಲಾಗಿದೆ. ಪ್ರಸ್ತುತ ಪ್ರಕರಣದಲ್ಲಿ , ಮೊದಲನೇ ಮೇಲ್ಮನವಿ ನ್ಯಾಯಾಲಯದ ತೀರ್ಪು ಏಕೆ ಹಸ್ತಕ್ಷೇಪ ಬಯಸಿತ್ತು ಎಂಬುದಕ್ಕೆ ಉಚ್ಚ ನ್ಯಾಯಾಲಯ ಸ್ಪಷ್ಟ ಮತ್ತು ಮನ -ಒಪ್ಪುವ ಕಾರಣಗಳನ್ನು ಅಭಿಲೇಖಿಸಿದೆ. ಮುಖ್ಯ ಪುರಾವೆಯನ್ನು ಕಡೆಗಣಿಸಿ ಕಡತವನ್ನು ನೈಜ ದೃಷ್ಟಿಕೋನದಿಂದ ಪರಿಗಣಿಸುವಲ್ಲಿ ಮತ್ತು ವಿಚಾರಣಾ ನ್ಯಾಯಾಲಯದ ಜಯಪತ್ರವನ್ನು ತಳ್ಳಿಹಾಕುವಲ್ಲಿ ಮೊದಲನೇ ಮೇಲ್ಮನವಿ ನ್ಯಾಯಾಲಯ ಪ್ರಮಾದ -ವೆಸಗಿತ್ತು–ಎರಡನೇ ಮೇಲ್ಮನವಿಯಲ್ಲಿ , ಒದಗಿಸಿದ ಸಾಕ್ಷ್ಯದ ಬೆಳಕಿನಲ್ಲಿ ದಸ್ತಾಜುಗಳನ್ನು ಪರಿಶೀಲಿಸಲು ಉಚ್ಚ ನ್ಯಾಯಾಲಯ ಮುಂದುವರೆದು ಮತ್ತು ಕಲಮು ೧೦೩ ರಡಿ ಎಂಬಂತೆಯೇ ನಿರ್ಣಯ -ಗಳನ್ನು ಸರಿಪಡಿಸಿತು. ಉಚ್ಚ ನ್ಯಾಯಾಲಯದ ಪ್ರಶ್ನಿತ ತೀರ್ಪು, ಕಲಮು ೧೦೩ ನ್ನು ಎಲ್ಲೂ ಸ್ಪಷ್ಟವಾಗಿ ಉಲ್ಲೇಖಿಸಿಲ್ಲ. ಆದಾಗ್ಯೂ,ಪ್ರಕರಣದ ಸಂದರ್ಭಗಳಲ್ಲಿ ಆ ನಿಬಂಧನೆಯ ಬೆಳಕಿನಲ್ಲೇ ಉಚ್ಚ ನ್ಯಾಯಾಲಯದ ಅಧಿಕಾರ ಚಲಾಯಿಸಿದೆ ಎಂಬುದು ಸ್ಪಷ್ಟವಾಗಿದೆ.

ಮೇಲ್ಮನವಿಗಳನ್ನು ವಜಾಗೊಳಿಸುತ್ತಾ , ನ್ಯಾಯಾಲಯ:

ನಿರ್ಧರಿಸಿತು:೦೧

ನಾ. ಪ್ರ. ಸಂ. ಕಲಮು ೧೦೦ ರ ಅಡಿಯಲ್ಲಿ ಉಚ್ಚ ನ್ಯಾಯಾಲಯ ಹೊಂದುವ ಅಧಿಕಾರ ಅದು ರಚಿಸುವ ಕಾನೂನಿನ ಗಣನೀಯ ಪ್ರಶ್ನೆಯನ್ನು ಅವಲಂಭಿಸಿದೆ. ಕಾನೂನಿನ ಪ್ರಕಾರ, ಸ್ವಯಂವೇದ್ಯವಾದಂತೆ ಮೊದಲನೇ ಮೇಲ್ಮನವಿ ನ್ಯಾಯಾಲಯದ ತೀರ್ಮಾನಗಳೇ ಅಂತಿಮ. ಆದಾಗ್ಯೂ, ಕಾನೂನಿನ ಗಣನೀಯ ಪ್ರಶ್ನೆಯಿಲ್ಲದಿದ್ದಲ್ಲಿ , ಕೆಳ ನಾಯಾಲಯದ ನಿರ್ಣಯಗಳಲ್ಲಿ ಅಥವಾ ಸಮವರ್ತಿ ನಿರ್ಣಯಗಳಲ್ಲಿ ಉಚ್ಚ ನ್ಯಾಯಾಲಯಗಳು ಹಸ್ತಕ್ಷೇಪ ಮಾಡಬಾರ ದೆಂಬ ನಿಯಮ ಎರಡು ಮುಖ್ಯವಾದ ಮುನ್ನೆಚ್ಚರಿಕೆ -ಗಳಿಗೆ ಒಳಪಟ್ಟಿದೆ.

ಮೊದಲನೆಯದು, ಸಂಗತಿಯ ಮೇಲಿನ ಅಭಿಪ್ರಾಯ ಸ್ಪಷ್ಟವಾಗಿ ವಿಕೃತವಾಗಿದ್ದರೆ ಅಥವಾ ನ್ಯಾಯಾಲಯದ ಪ್ರಜ್ಞೆಗೆ ಘಾತಕವಾಗಿದ್ದರೆ; ಬೇರೇ ರೀತಿಯಲ್ಲೇ ಹೇಳುವುದಾದರೆ, ಹಸ್ತಕ್ಷೇಪ ಸಮರ್ಥನೀಯ ಎಂದು ಕಡತಕ್ಕೆ ಒದಗಿಸಿರುವ ಸಂಗತಿಗಳಿಂದಲೇ ತರ್ಕದ ಮುಖದಂತೆ ಜಿಗಿದು ಬರುವಂತಿರಬೇಕು, **ಮತ್ತೊಂದು**:

ನಾ. ಪ್ರ. ಸಂ. ಕಲಮು ೧೦೩ ರ ಅಡಿಯಲ್ಲಿ ಹೇಳಿರುವ ಸೀಮಿತ ಸಂದರ್ಭಗಳಲ್ಲಿ ಸಂಗತಿ ಮೇಲಿನ ನಿರ್ಣಯಗಳು ಪರಿಶೀಲನೆಗೆ ಆಹ್ವಾನಿಸಿ ಮತ್ತು ಅಡಿಮೇಲು ಆಗಬಹುದು.[ಪರಿಚ್ಛೇದ೧೪][೧೧೬-ಸಿ-ಡಿ]

೨. ಪ್ರಸ್ತುತ ಪ್ರಕರಣದಲ್ಲಿ , ಮೊದಲನೇ ಮೇಲ್ಮನವಿ ನ್ಯಾಯಾಲಯದ ತೀರ್ಪು ಏಕೆ ಹಸ್ತಕ್ಷೇಪ ಬಯಸಿತ್ತು ಎಂಬುದಕ್ಕೆ ಉಚ್ಚ ನ್ಯಾಯಾಲಯ ಸ್ವಸ್ಥ ಮತ್ತು ಮನ ಒಪ್ಪುವ ಕಾರಣಗಳನ್ನು ಅಭಿಲೇಖಿಸಿದೆ. ಇವು ಪಕ್ಷಕಾರರು ಮುಂದಿಟ್ಟಿರುವ ಕಡತದ ಮೇಲಿನ

ಪುರಾವೆಯನ್ನು ಪೂರಾ ಅವಲಂಬಿಸಿವೆ. ಮೊದಲನೇ ಮೇಲ್ಮನವಿ ನ್ಯಾಯಾಲಯ, ಮುಖ್ಯ ಪುರಾವೆಯನ್ನು ಕಡೆಗಣಿಸಿ ಮತ್ತು ಕಡತವನ್ನು ನೈಜ ದೃಷ್ಟಿಕೋನ -ದಿಂದ ಪರಿಗಣಿಸುವಲ್ಲಿ ಪ್ರಮಾದ ಎಸಗಿದೆಯೆಂದು ವಿಚಾರಣಾ ನ್ಯಾಯಾಲಯದ ಜಯ ಪತ್ರವನ್ನು ರದ್ದು ಮಾಡಿತು. ಮೇಲಾಗಿ, ಎರಡನೇ ಮೇಲ್ಮನವಿಯಲ್ಲಿ ,

ಮುಂದಿಟ್ಟಿದ್ದ ಸಾಕ್ಷ್ಯದ ಬೆಳಕಿನಲ್ಲಿ ಉಚ್ಚ ನ್ಯಾಯಾಲಯ ದಸ್ತಾಜುಗಳನ್ನು ಪರಿಶೀಲಿಸಲು ಮುಂದುವರೆದು ಮತ್ತು ಕಲಮು ೧೦೩ ರಡಿ ಎಂಬಂತೆಯೇ ನಿರ್ಣಯಗಳನ್ನು ಸರಿಪಡಿಸಿತು.

ಮೇಲ್ಮನವಿದಾರರ ವಾದಗಳು ಪ್ರಭಲವಾಗುವುದಾ -ದರೆ, ಪೂರಾ ತಪ್ಪಾಗಿ ಪ್ರಶಂಸಿಸಿರುವ ಮತ್ತು ಕಡೆಗಣಿಸಿರುವ ಮುಖ್ಯ ಸಾಕ್ಷ್ಯವನ್ನು ಅವಲಂಭಿಸಿ ಸಂಗತಿಗಳಮೇಲೆ ಅಭಿಲೇಖಿಸಿರುವ ಅಭಿಪ್ರಾಯಗಳು ಅವಶ್ಯವಾಗಿ ಉಳಿಯಬೇಕು ಮತ್ತು ಪಕ್ಷಕಾರರನ್ನು ಬಂಧಿಸುತ್ತದೆ, ಆ ಮೂಲಕ ಅನ್ಯಾಯವಾಗುತ್ತದೆ. ಆದಾಗಿ, ನಿರ್ದಿಷ್ಟವಾಗಿ ಅಂತಹ ಕಾರಣಗಳಿಗಾಗಿ ಸೀಮಿತ ಸಂದರ್ಭಗಳಲ್ಲಿ ಉಚ್ಚ ನ್ಯಾಯಾಲಯಗಳು ನಾ. ಪ್ರ. ಸಂ. ಕಲಮು ೧೦೩ ರ ಅಡಿಯಲ್ಲಿ ಹೇಳಿರುವ ಸಂಗತಿಗಳ ವಿಮರ್ಶೆ ಮಾಡಲು ಅಧಿಕಾರ ಹೊಂದಿವೆ. ಏನೇ ಆದರೂ, ಅಂತಹ ಅಧಿಕಾರವನ್ನು ಚಲಾಯಿಸ -ಬಹುದು ಎಂಬುದನ್ನು ಅನುಮಾನಿಸಲಾಗದು.

ಪ್ರಶ್ನಿತ ತೀರ್ಪು ನೇರವಾಗಿ ಆ ಒಂದು ಅವಕಾಶವನ್ನು ಎಲ್ಲೂ ಸ್ಪಷ್ಟವಾಗಿ ಉಲ್ಲೇಖಿಸಿಲ್ಲ.ಆ ಒಂದು ಅವಕಾಶ -ದ ಬೆಳಕಿನಲ್ಲಿ ಉಚ್ಚ ನ್ಯಾಯಾಲಯ ಪ್ರಕರಣದಲ್ಲಿನ ಸಂದರ್ಭಗಳಲ್ಲಿ , ಆ ಅಧಿಕಾರವನ್ನು ಚಲಾಯಿಸಿದೆ.

ಒಟ್ಟಾರೆ ಸಂದರ್ಭಗಳಿಗೆ ಸಂಬಂಧಿಸಿದಂತೆ, ವಿಶೇಷ ಅನುಮತಿಯ ಅಧಿಕಾರ ವ್ಯಾಪ್ತಿ ಚಲಾಯಿಸುವಲ್ಲಿ , ಪ್ರಶ್ನಿತ ತೀರ್ಪು ಹಸ್ತಕ್ಷೇಪಕ್ಕೆ ಆಹ್ವಾನಿಸುವುದಿಲ್ಲ (ಅಂತಿಮ ಸುನಾವಣೆಯ ಸಮಯದಲ್ಲೂ -ಈ ನ್ಯಾಯಾಲಯಕ್ಕೆ ದೊರಕುವ).

ಮುನ್ಸಿಪಲ್ ಕಮಿಟಿ, ಹೋಷಿಯಾರ್ಪುರ್

ವಿರುದ್ಧ ಪಂಜಾಬ್ ಸ್ಟೇಟ್ ಎಲಕ್ಟ್ರಿ, ಸಿಟಿ ಬೋರ್ಡ್, (೨೦೧೦) ೧೩ ಎಸ್ಸ್ ಸಿ ಸಿ ೨೧೬:[೨೦೧೦] ೧೩ ಎಸ್ಸ್ ಸಿ ಆರ್ ೬೫೮, ಮತ್ತು

ನಾರಾಯಣನ್ ಸೀತಾರಾಮ್ಜಿ ಬಾಡ್ಕೆ(ಮೃತ)

ಕಾನೂನು ಸಮ್ಮತ ಪ್ರತಿನಿದಿಗಳ ಮೂಲಕ, ವಿರುದ್ಧ

ಬಿಸರಾಮ್ ಮತ್ತು ಇತರರು.(೨೦೨೧) ಎಸ್ಸ್ ಸಿ ಸಿ ಅಂತರ್ಜಾಲ ಸಂಪರ್ಕ(on line) ಎಸ್ಸ್ ಸಿ ೩೧೯ ರಲ್ಲಿ ಉಲ್ಲೇಖ…

ಉಲ್ಲೇಖಿತ ಹಿಂತೀರ್ಪುಗಳು.

[೨೦೧೦]೧೩ ಎಸ್ಸ್ ಸಿ ಆರ್ ೬೫೮, ಉಲ್ಲೇಖ ಪರಿಚ್ಛೇದ ೧೬

ಅಂತರ್ಜಾಲ ಸಂಪರ್ಕ(on line) ಎಸ್ಸ್ ಸಿ ೩೧೯ ಪರಿಚ್ಛೇದ ೧೭.

ನಾಗರೀಕ ಮೇಲ್ಮನವಿ ವ್ಯಾಪ್ತಿ:

ನಾಗರೀಕ ಮೇಲ್ಮನವಿ ಸಂಖ್ಯೆ:೫೦೩೩-೫೦೩೪/೨೦೦೯

ನಿಯತ ಎರಡನೇ ಮೇಲ್ಮನವಿ ಸಂಖ್ಯೆ: ೩೬೮/೨೦೦೨ ಜೊತೆ ನಿಯತ ಎರಡನೇ ಮೇಲ್ಮನವಿ ಸಂಖ್ಯೆ ೭೩೬/೨೦೦೨ ಇವುಗಳಲ್ಲಿ ದಿನಾಂಕ ೩೦:೦೭:೨೦೦೮ ರಂದು ಕರ್ನಾಟಕದ ಉಚ್ಚ ನ್ಯಾಯಾಲಯ ಬೆಂಗಳೂರು ಇದರ ತೀರ್ಪು ಮತ್ತು ಆದೇಶದಿಂದ:

ಡಿ. ಪಿ. ಚತುರ್ವೇದಿ , ಎಸ್. ಎನ್. ಭಟ್

ವಕೀಲರು, ಮೇಲ್ಮನವಿದಾರರ ಪರವಾಗಿ,

ಶ್ರೀಮತಿ ನನಿತಾ ಶರ್ಮ

ವಕೀಲರು, ಎದುರಾಳಿ ಪರವಾಗಿ.

ನ್ಯಾಯಲಯದ ತೀರ್ಪನ್ನು ನೀಡಿದವರು,

ನ್ಯಾಯಮೂರ್ತಿ ಎಸ್. ರವಿಂದ್ರ ಭಟ್:

೦೧. ಮೊದಲನೇ ಮೇಲ್ಮನವಿಯ ಜಯಪತ್ರವನ್ನು ರದ್ದು ಪಡಿಸಿ ಕರ್ನಾಟಕ ಉಚ್ಚ ನ್ಯಾಲಯವು ಹೊರಡಿಸಿದ್ದ ಸಮಾನವಾದ ತೀರ್ಪನ್ನು ವಿಶೇಷ ಅನುಮತಿಯ ಈ ಮೇಲ್ಮನವಿಗಳಲ್ಲಿ ಪ್ರಶ್ನಿಸಲಾಗಿದೆ.

೦೨. ಈ ಪ್ರಕರಣ ಉದ್ದೇಶಕ್ಕೆ ಅಗತ್ಯದ ಸಂಗತಿಗಳು ಏನೆಂದರೆ, ಸ್ಪಷ್ಟವಾದ ತುಂಡು ಜಮೀನುಗಳ ಬಗ್ಗೆ ದಿನಾಂಕ ೩೮-೦೫-೧೯೭೩ ರಂದು ನೋಂದಣಿ ಕ್ರಯ ಪತ್ರಗಳನ್ನು ಬರೆದುಕೊಡಲಾ -ಯಿತು. ಅದೇ ದಿವಸ , ಸರ್ವೆ ಸಂಖ್ಯೆ ೩೬/೧ (೨೮ ಗುಂಟೆಗಳು) , ಸರ್ವೆ ಸಂಖ್ಯೆ ೩೭ (೧ ಎಕರೆ ೩೦ಗುಂಟೆಗಳು) ಮತ್ತು ಸರ್ವೆ ಸಂಖ್ಯೆ ೨೮/೨ (೧೩ ಗುಂಟೆಗಳು) ಮೂರು ತುಂಡು ಜಮೀನುಗಳಿಗೆ ಸಂಬಂಧಪಟ್ಟ ಒಂದೇ ವ್ಯವಹರಣೆ ಸಮಾನವಾದ ಕ್ರಯಪತ್ರದಡಿ ಆಗಿದ್ದು ಆ ದಸ್ತಾವೇಜು ವಿಚಾರಣಾ ನ್ಯಾಯಾಲಯದ ಮುಂದೆ (ವಾದಿ) ಪ್ರದರ್ಶಿತ ಪತ್ರ -೦೧ [Ex.p-01] ಎಂದು ಗುರುತಾಗಿದ್ದು, ಒಟ್ಟಾಗಿ " ದಾವಾ ಜಮೀನುಗಳು" ಎಂದು ಕರೆಯಲಾಗಿದೆ. ಈ ದಸ್ತಾವೇಜು ವಿವಾದಲ್ಲಿಲ್ಲ. ಇಲ್ಲಿನ ವಾದಿ/ ಎದುರಾಳಿ- ಕ್ರಯದಾರರು ಹಕ್ಕಿನ ಘೋಷಣೆ ಮತ್ತು ಮೆಸ್ನೆ ಲಾಭಕ್ಕೂ (mesne profits) ಸೇರಿದಂತೆ ಸ್ವಾದಿನಕ್ಕೆ ಕೋರಿ ಅಸಲು ದಾವಾ ಸಂಖ್ಯೆ ೨೦/೧೯೮೫ ರಲ್ಲಿ ದಾವೆಯೊಂದನ್ನು (ಇನ್ನು ಮುಂದೆ ಇದನ್ನು ಒಂದನೇ ದಾವೆಯೆಂದು ಕರೆಯಲಾಗುವುದು) ದಾಖಲಿಸಿದರು. ವಾದಿಗಳು/ಎದುರಾಳಿಗಳು ದಾವಾ ಜಮೀನುಗಳನ್ನು

ನೋಂದಾ ಯಿಸಿದ ಕ್ರಯಪತ್ರದಡಿ ಎದುರಾಳಿ (ಪ್ರತಿವಾದಿಗಳು) ಗಳಿಂದ ಕೊಂಡಿದ್ದರೆಂಬುದು ಹಕ್ಕೊತ್ತಾಯದ ಚೌಕಟ್ಟಿನ ಸಂಗತಿಗಳಾಗಿದ್ದವು. ವಾದಿ/ಎದುರಾಳಿಗಳನ್ನು ದಾವಾ ಜಮೀನುಗಳ ಸ್ವಾದೀನದಲ್ಲಿ ಇಟ್ಟಿದ್ದಾಗ್ಯೂ, ನಂತರದಲ್ಲಿ ಬೆಳೆದ ವೈಮನಸ್ಸಿನಿಂದಾಗಿ ಅವರು ಸ್ವಾಧೀನದ ಹಕ್ಕುಕೋರಿ ಭೂ ನ್ಯಾಯಮಂಡಳಿಯ ಮೊರೆ ಹೋಗಿ ಅವರನ್ನು ಅಂದರೆ., ವಾದಿ/ಪ್ರತಿವಾದಿಗಳನ್ನು ದಾವಾ ಜಮೀನುಗಳಿಂದ ಉಚ್ಚಾಟಿ -ಸಲು ಕ್ರಮ ಕೈ-ಗೊಂಡಿದ್ದರೆಂದು ಪ್ರತಿಪಾದಿಸಲಾ -ಯಿತು. ಭೂ- ನ್ಯಾಯಮಂಡಳಿ ಮೊದಲಿಗೆ ಮೇಲ್ಮನ -ವಿದಾರರ ಪರ ನಿರ್ಣಯಿಸಿತು: ಆದರೆ ಆ ನಿರ್ಣಯ -ವನ್ನು ರಿಟ್ ಅರ್ಜಿ ಸಂಖ್ಯೆ ೧೨೬೬೨/೧೯೮೧ ರಲ್ಲಿ ಉಚ್ಚ ನ್ಯಾಯಾಲಯ ತಳ್ಳಿ ಹಾಕಿತು. ಮರು -ಪರಿಶೀಲನೆಗೆಂದು ವಿವಾದವನ್ನು ಭೂ- ನ್ಯಾಯ ಮಂಡಳಿಗೇ ಹಿಂತಿರುಗಿಸಿತು. ಈ ಬಾರಿ ಸುತ್ತಿನಲ್ಲಿ, ವಿವಾದಗಳನ್ನು ಬಗೆಹರಿಸಿಕೊಳ್ಳಬೇಕೆಂದು ನಾಗರೀಕ ನ್ಯಾಯಾಲಯದ ಮೊರೆ ಹೋಗಲು ಪಕ್ಷಕಾರರಿಗೆ ಭೂ- ನ್ಯಾಯಮಂಡಳಿ ನಿರ್ದೇಶಿಸಿತು. ಆದುದರಿಂದ, ವಾದಿ/ಎದುರಾಳಿಗಳು ಘೋಷಣೆ ಮತ್ತು ಸ್ವಾಧಿನಕ್ಕೆಂದು ಒಂದನೇ ದಾವೆಯನ್ನು ದಾಖಲಿ -ಸಿದರು. ಮೇಲ್ಮನವಿದಾರರು ಒಂದನೇ ದಾವೆಯನ್ನು ರಕ್ಷಿಸಿಕೊಂಡರು ಮತ್ತು ಹಕ್ಕೊತ್ತಾಯವನ್ನು ನಿರಾಕಾರ ಮಾಡಿದರು.

೦೩. ಮೇಲ್ಮನವಿದಾರರು ದಾವೆಯೊಂದನ್ನು ದಾಖಲಿಸಿದರು-(ಅಸಲು ದಾವೆ ಸಂಖ್ಯೆ೨೨/೧೯೮೫, ಇನ್ನು ಮುಂದೆ "ಎರಡನೇ ದಾವೆ" ಯೆಂದು ಕರೆಯಲಾಗುವುದು). ಎದುರಾಳಿಗೆ (ಎರಡನೇ ದಾವೆ ಯಲ್ಲಿ ಪ್ರತಿವಾದಿ) ಬರೆದುಕೊಟ್ಟಿದ್ದ ಕ್ರಯಪತ್ರ ವಾದಿ ಪ್ರದರ್ಶಿತ ಪತ್ರ -೦೧ ನ್ನು ನಾಮ ನಿಮಿತ್ತ ಮಾತ್ರದ್ದು ಮತ್ತು ಅದನ್ನು ಎದರಾಳಿ ಮುಂಗಡವಾಗಿ ಪಡೆದಿದ್ದ ಸಾಲದ ಭದ್ರತೆಗೆಂದು ಬರೆದುಕೊಡಲಾಗಿತ್ತೆಂದು ಆಪಾದಿಸಿದರು. ಯಾವ ದಸ್ತಾವೇಜನಡಿ ಮೇಲ್ಮನವಿದಾರರಿಗೆ ದಾವಾಸ್ವತ್ತುಗಳನ್ನು ಬರೆದುಕೊಡಲು ಅಥವಾ ಹಿಂತಿರಿಗಿಸಲು ಮಾರಟದ ಒಪ್ಪಂದ ಕರಾರು ಎಂದು ಮೇಲ್ಮನವಿದಾರರು ಹೇಳಿದರೋ, ಅದನ್ನೇ ಅವರು ಅವಲಂಬಿಸಿದರು. ಈ ಒಪ್ಪಂದ ಕರಾರಿನ ಷರತ್ತಿನಂತೆ, ಮೇಲ್ಮನವಿದಾರರು ಮೂರು ವರುಷಗಳೊಳಗೆ ೯೦೦೦/-ರೂಪಾಯಿಗಳನ್ನು ಪಾವ್ತಿಸಬೇಕಿತ್ತು. ಪೂರಾ ೯೦೦೦/-ರೂಪಾಯಿಗಳನ್ನು ಶೇಕಡ ೧೫ರ ಬಡ್ಡಿಯೊಂದಿಗೆ ಪಡೆದಿದ್ದಾಗ್ಯೂ, ಎದರಾಳಿ ಕ್ರಯಪತ್ರ ಬರೆದಕೊಡಲಿಲ್ಲವೆಂದು ಆಪಾದಿಸಿ ಹಕ್ಕಿನ ಘೋಷಣೆ ಮತ್ತು ಶಾಶ್ವತ ನಿರ್ಬಂಧಕಾಜ್ಞೆಗೆಂದು , ಮತ್ತು ಪರ್ಯಾಯವಾಗಿ, ತಾರೀಖು ೨೮:೦೫:೧೯೭೩ ರ ಮಾರಾಟ ಕರಾರು ಪತ್ರದ ನಿರ್ದಿಷ್ಟಪಾಲನೆಗೆಂದು, ಮೇಲ್ಮನವಿದಾರರು ಎರಡನೇ ದಾವೆಯನ್ನು ದಾಖಲಿಸಿದರು. ದಾವಾ ಸ್ವತ್ತುಗಳ ಸ್ವಾದೀನದಲ್ಲಿ ತಾವೇ ಇರುವುದಾಗಿ

ಸಹ ಮೇಲ್ಮನವಿದಾರರು ಪ್ರತಿಪಾದಿಸಿದರು. ದಾವಾ ಸ್ವತ್ತಿನ ಸ್ವಾಧೀನದಲ್ಲಿ ತಾವೇ ಇರುವುದಾಗಿ ಸಹಾ ಪ್ರತಿಪಾದಿಸಿದರು.

೦೪. ಹಕ್ಕು , ಸ್ವಾಧೀನ ಮತ್ತು ನಿರ್ದಿಷ್ಟ ಪಾಲನೆಗಳಿಗೆ ಸಂಬಂಧಿಸಿದಂತೆ ವಿವಾದಾಂಶಗಳನ್ನು ರೂಪಿಸಿತು ಮತ್ತು ಸಾಮನ್ಯ ಪುರಾವೆಯನ್ನು ದಾಖಲಿಸಿಕೊಳ್ಳಲು ಮುಂದಾಯಿತು. ಮಾರಾಟ ಪತ್ರದ (ನೋಂದಾಯಿತ ದಾಖಲೆ) ಆಧಾರದಮೇಲೆ ಎದುರಿಗಳು ದಾವೆಯ ಆಸ್ತಿಗಳ ಸಂಪೂರ್ಣ ಮಾಲೀಕರಾಗಿದ್ದಾರೆಂದು ವಿಚಾರಣಾ ನ್ಯಾಯಾಲಯ ತೀರ್ಪು ನೀಡಿತು ಮತ್ತು ಎರಡನೇ ದಾವೆಯನ್ನು ಸಲ್ಲಿಸಿದ ಮೇಲ್ಮನವಿದಾರರು ದಾವಾ ಆಸ್ತಿಗಳನ್ನು ಅಕ್ರಮವಾಗಿ ಸ್ವಾದೀನ ಹೊಂದಿದ್ದರೆಂದು ತೀರ್ಮಾನಿಸಿತು. ನಿರ್ದಿಷ್ಟ ಪಾಲನೆಗೆಂದು ಕೋರಿದ್ದ ಒಪ್ಪಂದದ ಕರಾರಿನ ಜಾರಿಯನ್ನು ತಾವು ಸಾಬೀತುಪಡಿಸುವಲ್ಲಿ ಮೇಲ್ಮನವಿದಾರರು ವಿಫಲರಾಗಿದ್ದರೆಂದು ತೀರ್ಪು ನೀಡಿತು. ಪಕ್ಷಕಾರರು ಅವಲಂಬಿಸಿರುವ ಸಾಕ್ಷ ಪುರಾವೆಗಳ ಆಧಾರದಮೇಲೆ ವಿವಾದಾಂಶಗಳನ್ನು ನಿರ್ಧರಿಸಲಾಯಿತು. ಪರಿಣಾಮವಾಗಿ, ಎದುರಾಳಿಯ ದಾವೆ ಅಂಜರೆ, ಘೋಷಣೆ, ಹಕ್ಕು ಮತ್ತು ಸ್ವಾಧೀನದ ಮೊದಲದಾವೆಯನ್ನು ಅವನ ಪರವಾಗಿ ತೀರ್ಮಾನಿಸಿತು. ಆದಾಗಿ, ಮೇಲ್ಮನವಿದಾರನ ದಾವೆಯನ್ನು ವಜಾಗೊಳಿಸಿತು.

೦೫.ಎರಡನೇ ದಾವೆ ವಜಾ ಆದ ಮತ್ತು ಮೊದಲ ದಾವೆಯಲ್ಲಿ ಎದುರಾಳಿ ಪರವಾಗಿ ಆದ ತೀರ್ಪಿನಿಂದ ಅಸಮಾಧಾನಗೊಂಡ ಮೇಲ್ಮನವಿದಾರನು ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರ ಮುಂದೆ ಮೇಲ್ಮನವಿಗಳನ್ನು ದಾಖಲಿಸಿದನು. ವಿಚಾರಣಾ ನ್ಯಾಯಾಲಯದ ಸಾಮಾನ್ಯ ತೀರ್ಪಿನಂತೆ , ಎರಡೂ ಮೇಲ್ಮನವಿಗಳನ್ನು ಒಟ್ಟಿಗೇ ಪರಿಗಣಿಸಲಾಯಿತು. ಮೊದಲ ಮೇಲ್ಮನವಿ ನ್ಯಾಯಾಲಯ ಮೇಲ್ಮನವಿದಾರರ ಸಲ್ಲಿಕೆಗಳಿಗೆ ವಿಶ್ವಾಸ ನೀಡಿತು ಮತ್ತು ಅವರ ಮನವಿಯನ್ನು ಪುರಸ್ಕರಿಸಿತು. ಪರಿಣಾಮವಾಗಿ, ಎದುರಾಳಿ - ಪ್ರತಿವಾದಿ ಗಳ ಪರವಾಗಿ ಮಾರಾಟ ಪತ್ರವು ನಾಮ ನಿಮಿತ್ತಮಾತ್ರದ್ದಾಗಿದ್ದು ಮತ್ತು ಅದರ ಮೇಲೆ ಕ್ರಮ ಕೈ ಗೊಳ್ಳುವ ಉದ್ದೇಶಕ್ಕೆ ಅಲ್ಲವೆಂದು ನಿರ್ಣಯಿಸಿತು. ಮೇಲ್ಮನವಿದಾರರು ಮಾರಾಟಕ್ಕೆ ಕರಾರು ಒಪ್ಪಂದವನ್ನು ಸಾಬೀತುಪಡಿಸಿದ್ದಾರೆ ಮತ್ತು ಅದರ ನಿರ್ದಿಷ್ಟ ಪಾಲನೆಗೆ ಜಯಪತ್ರ ಪಡೆಯಲು ಅರ್ಹರು ಎಂದೂ ಸಹ ನಿರ್ಣಯಿಸಲಾಯಿತು.

೦೬. ಬಾಧಿತ ಎದುರಾಳಿಗಳು ಎರಡನ್ ಮೇಲ್ಮನವಿಗಳೊಂದಿಗೆ, ಆರ್ ಎಸ್ ಎ ಸಂಖ್ಯೆ:೩೬೮/೨೦೦೨ ಮತ್ತು ೩೭೬/೨೦೦೨ ರಡಿ ಉಚ್ಚ ನ್ಯಾಯಾಲಯದ ಮೊರೆ ಹೋದರು.

ಒಂದೆಡೆ ತಮ್ಮ ದಾವೆಯನ್ನು ವಜಾ ಮಾಡಿ ಮತ್ತೊಂದೆಡೆ ಮೊದಲನೇ ಮೇಲ್ಮನವಿ ನ್ಯಾಯಾಲಯ ಎರಡನೇ ದಾವೆಯನ್ನು ಪುರಸ್ಕರಿಸಿ ಮೇಲ್ಮನವಿದಾರರ ಪರ ತೀರ್ಪು ನೀಡಿರುವುದು ಕಾನೂನಿಡಿ ದೋಷವಾಗಿದೆಯೆಂದು ಎದುರಿಗಳು ಪ್ರತಿಪಾಧಿಸಿದರು. ಕರ್ನಾಟಕ ಉಚ್ಚ ನ್ಯಾಯಾಲಯವು ಈ ಕೆಳಗಿನಂತೆ ಕಾನೂನಿನ ಅಂಶವನ್ನಪ ಪರಿಗಣನೆಗೆ ರೂಪಿಸಿತು:

ಕೆಳ ಮೇಲ್ಮನವಿ ನ್ಯಾಯಾಲಯವು ವಾದಿ ಪ್ರದರ್ಶಿತ ಪತ್ರ-೩ ರ ಆಧಾರದ ಮೇಲೆ ಎದುರಿಗಳ ಪರ ಜಯಪತ್ರ ನೀಡಿರುವುದು ಸಮರ್ಥನೀಯವಾಗಿದೆಯೇ?

೦೭. ಮೇಲ್ಮನವಿದಾರ ಅವಲಂಭಿಸಿರುವ ಮಾರಾಟಕ್ಕೆ ಕರಾರು ಅಂದರೆ, ಪ್ರತಿವಾದಿ ಪ್ರಧರ್ಶಿತ ಪತ್ರ-೦೩ ಇದರ ನೈಜತೆ ಮತ್ತು ಸತ್ಯಾಸತ್ಯತೆಗೆ ಸಂಬಂಧಿಸಿದ್ದೇ ಮುಖ್ಯ ಅಡಿಪಾಯ ಎಂದು ಉಚ್ಚ ನ್ಯಾಯಾಲಯವು ಗಮನಿಸಿತು. ಎದುರುದಾರರ ಪರ ಇದ್ದ ವಿಚಾರಣಾ ನ್ಯಾಯಾಲಯದ ನಿರ್ಣಯಗಳು ಮೊದಲನೇ ಮೇಲ್ಮನವಿ ನ್ಯಾಯಾಲಯದಿಂದ ಹಿಮ್ಮುಕವಾದ -ಮೇಲೆ, ಕಡತದ ಮೇಲಿರುವ ವಿಚಾರಗಳಿಂದ ಪ್ರತಿವಾದಿ ಪ್ರಧರ್ಶಿತ ಪತ್ರ-೦೩ನ್ನು ನೈಜ ದಸ್ತಾವೇಜೆಂದು ಪರಿಗಣಿಸಬಹುದೇ? ಎಂಬುದಾಗಿ ಪರಿಗಣಿಸಲು ಉಚ್ಚ ನ್ಯಾಯಾಲಯವು ಮುಂದಾಯಿತು. ವಿಚಾರಣಾ ನ್ಯಾಯಾಲಯದ ನಿರ್ಣಯಗಳು ಹಲವಾರು ಅಂಶಗಳನ್ನು ಆಧರಿಸಿವೆ ಎಂಬುದಾಗಿ ಉಚ್ಚ ನ್ಯಾಯಾಲಯವು ಗಮನಿಸಿತು. ಮೊದಲನೆಯದಾಗಿ, ಪ್ರತಿವಾದಿ ಪ್ರಧರ್ಶಿತ ಪತ್ರ-೦೩ನ್ನು ವಾದಿ ಪ್ರಧರ್ಶಿತ ಪತ್ರ-೦೧ ಗಿನ್ನ (ಒಪ್ಪಿತವಾಗಿರುವ ನೋಂದಾಯಿತ ಕ್ರಯಪತ್ರ) ಭಿನ್ನವಾಗಿ ಬರೆದಿರುವ ರೀತಿ. ಸನ್ನಿವೇಶದಲ್ಲಿ ಇರುವ ಮತ್ತು ವಿಸ್ತೀರ್ಣವೂ ಸೇರಿದಂತೆ ದಾವೆಯ ಅಂಶವಾದ (ಅಂದರೆ, ಸರ್ವೆ ಸಂಖ್ಯೆ ೩೬-೩೮) ಜಮೀನಿನುಗಳ ಯಾವುದೇ ವಿವರಣೆಗಳನ್ನು ಮತ್ತು ಇತರೆ ಅಗತ್ಯ ವಿವರಗಳನ್ನು ಪ್ರತಿವಾದಿ ಪ್ರಧರ್ಶಿತ ಪತ್ರ-೦೩ ಸ್ಪಷ್ಟವಾಗಿ ಹೊಂದಿಲ್ಲ. ಮಾರಾಟಕ್ಕೆ ಕರಾರು ಎಂದು ಹೇಳಲಾಗಿರುವುದನ್ನು (ಪ್ರತಿವಾದಿ ಪ್ರಧರ್ಶಿತ ಪತ್ರ-೦೩) ಒಪ್ಪತವಾಗಿರುವ ಕ್ರಯಪತ್ರ (ವಾದಿ ಪ್ರಧರ್ಶಿತ ಪತ್ರ-೦೧) ರ ಜತೆ ಇತರೆ ದಾಖಲೆಗಳಿಲ್ಲಿನ ಹೋಲಿಕೆ ಮಾಡಲಾಗಿ , ವಾದಿ ಪ್ರಧರ್ಶಿತ ಪತ್ರ-೦೧ನ್ನು ಬರೆದುಕೊಟ್ಟ ದಿನದಂದೇ, ಪ್ರತಿವಾದಿ ಪ್ರಧರ್ಶಿತ ಪತ್ರ-೦೩ ನ್ನೂ ಸಹ ಬರೆದು ಕೊಡಲಾಗಿತ್ತೆಂಬ ಮೇಲ್ಮನವಿದಾರರ ಪ್ರತಿಪಾದನೆಯನ್ನು ವಿಚಾರಣಾ ನ್ಯಾಯಾಲಯ ಒಪ್ಪಿಲ್ಲವೆಂಬುದನ್ನು ಉಚ್ಚ ನ್ಯಾಯಾಲಯ ಗಮನಿಸಿತು. ಪ್ರತಿವಾದಿ ಪ್ರಧರ್ಶಿತ ಪತ್ರ-೦೩ ನ್ನು ವಿಚಾರಣಾ ನ್ಯಾಯಾಲಯ ತಳ್ಳಿಹಾಕಿರುವುದಕ್ಕೆ ಉಚ್ಚ ನ್ಯಾಯಾಲಯ ಗಮನಿಸಿದ ಎರಡನೆಯ ಕಾರಣವೇನೆಂದರೆ,

ಸಾಲವೆಂದು ಹೇಳುವ ಕ್ರಯದ ಹಣದಮೇಲೆ ಬಡ್ಡಿ ಪಾವತಿಸುವ ಯಾವುದೇ ಷರತ್ತು ಆ ದಸ್ತಾವೇಜಿನಲ್ಲಿ ಇಲ್ಲ. ಮತ್ತೊಂದೆಡೆ, ಶೇಕಡ ೧೫% ರಂತೆ ಬಡ್ಡಿ ಪಾವತಿಸಲು ಒಪ್ಪಿಗೆ ಆಗಿತ್ತೆಂಬುದಾಗಿ ಮತ್ತು ಸಾಲದ ಅಥವಾ ಕ್ರಯದ ಹಣದ ಜೊತೆ ೨೭೦೦/- ರೂಗಳ ಬಡ್ಡಿಯನ್ನೂ ಡಿಸಹ ಕೊಡಲಾಗಿದೆಯಂದು ಮೇಲ್ಮನವಿದಾರರ ಸಾಕ್ಷ್ಯ. ವಾದಪತ್ರ ಮತ್ತು ದಸ್ತಾವೇಜುಗಳ ನಡುವಿನ ಈ ವಿರೋಧಾಬಾಸ ಒಂದು ಕಡೆಯಾದರೆ ಮತ್ತೊಂದು ಕಡೆ ಮೌಖಿಕ ಸಾಕ್ಷ್ಯ, ಮೇಲ್ಮನವಿದಾರರ ವಿರುದ್ಧದ ರೂಪಿಸುವ ಅಂಶವಾಗುತ್ತದೆ. ಮೂರನೆಯದಾಗಿ, ವಾಸ್ತವವಾಗಿ ಬಡ್ಡಿಯನ್ನು ಪಾವತಿಸಲಾಗಿದೆ ಎಂಬ ಅಂಶವನ್ನಾಗಲೀ ಅಥವಾ ೯೦೦೦/- ರೂಗಳ ಅಸಲನ್ನು ಹಿಂತಿರಿಗಿಸಿರುವುದು ನಿಜಸ್ಥಿತಿಯೆಂದು ಸಾಭೀತು ಪಡಿಸಲು ಮೇಲ್ಮನವಿದಾರರು ಯಾವುದೇ ಸಾಕ್ಷ್ಯ ಒದಗಿಸಿಲ್ಲ ಎಂಬದನ್ನು ಗಮನಿಸಿತು. ಆ ಬಗ್ಗೆ ಸ್ವೀಕೃತಿ ಚೀಟಿಯನ್ನು ಪಡೆಯದಿರುವುದು ಮತ್ತು ಅದನ್ನು ನ್ಯಾಯಾಲಯಕ್ಕೆ ಹಾಜರಿಮಾಡದಿರುವುದು, ಅವರ ಪ್ರಕರಣಕ್ಕೆ ಮಾರಕ ಎಂದು ನಿರ್ಣಯಿಸಲಾಯಿತು. ಕಡೆಯದಾಗಿ, ವಿಚಾರಣಾ ನ್ಯಾಯಾಲಯ ನಿರ್ಧರಿಸಿದ್ದೇನೆಂದರೆ ೯೦೦೦/- ರೂಗಳ ಮರುಪಾವತಿಗೆಂದು ಮೂರು ವರುಷಗಳ ಸಮಯ ತುಂಭಾ ಹಿಂದೆಯೇ ಕಳೆದು ಹೋಗಿದ್ದರಿಂದ, ಮೇಲ್ಮನವಿದಾರನ ಪ್ರತಿಪಾದನೆಯಂತೆ ನಿರ್ದಿಷ್ಟಪಾಲನೆಗೆಂದು ಎರಡನೇ ದಾವೆಯಲ್ಲಿನ ಅಹವಾಲು ವಾಯಿದೆ ಮೀರಿದ್ದಾಗಿತ್ತು.

೦೮. ಈ ಎಲ್ಲಾ ಸಂಗತಿಗಳನ್ನು ಗಮನಿಸಿದ ಮತ್ತು ಪ್ರ. ಪ್ರ. ಪತ್ರ ೦೩ ನ್ನೂ ಪರಿಗಣಿಸಿದ ಉಚ್ಚ ನ್ಯಾಯಾಲಯ, ತನ್ನ ಮುಂದಿದ್ದ ಎಲ್ಲಾ ನಿರ್ಣಯಗಳ ಆಧಾರದ ಮೇಲಿನ ವಿಚಾರಣಾ ನ್ಯಾಯಾಲಯದ ತೀರ್ಪು ಮತ್ತು ಜಯಪತ್ರ ದೃಡ ಮತ್ತು ಸಮರ್ಥನೀಯವಾಗಿತ್ತೆಂದು ನಿರ್ಣಯಿಸಿತು. ವಿಚಾರಣಾ ಕಾಲದಲ್ಲಿ ನ್ಯಾಯಾಲಯವು ಸಾಕ್ಷ್ಯ ಅಧಿನಿಯಮ ಕಾಯಿದೆ ಪ್ರಕರಣ ೭೩ ರ ಅವಕಾಶದಡಿ ದಸ್ತಾವೇಜನ್ನು ಪರಿಶೀಲಿಸಬಹುದೆಂಬ ಅಭಿಪ್ರಾಯವನ್ನು ಉಚ್ಚ ನ್ಯಾಯಾಲಯ ವ್ಯಕ್ತಪಡಿಸಿತು. ಪ್ರ. ಪ್ರ. ಪತ್ರ ೦೩ ರಮೇಲಿನ ಸಹಿ ತನ್ನದೆಂದು ಎದುರಾಳಿ ಒಪ್ಪಿಕೊಳ್ಳಲಿಲ್ಲವಾಗಿ ,ಒಪ್ಪಿತ ದಸ್ತಾವೇಜು ಅಂದರೆ, ವಾ. ಪ್ರ. ಪತ್ರ ೦೧ ಮತ್ತು ಅದರಲ್ಲಿನ ಸಹಿಯನ್ನು ಮತ್ತು ವಿವಾದಿತ ದಸ್ತಾವೇಜು ಪ್ರ. ಪ್ರ. ಪತ್ರ ೦೩ ರಮೇಲಿನ ಸಹಿ ಹೋಲಿಕೆಮಾಡಿ ಪರಿಶೀಲಿಸಲು ನ್ಯಾಯಾಲಯ ತನ್ನದೇ ಅಧಿಕಾರದಲ್ಲಿ ಕಾರ್ಯನಿರ್ವಹಿಸಿತು. ಉಚ್ಚ ನ್ಯಾಯಾಲಯದ ಪರಿಗಣನೆಗೆ ಬಂದ ಮತ್ತೊಂದು ಮುಖ್ಯ ಸಂದರ್ಭ ಯಾವುದೆಂದರೆ, ವಾ. ಪ್ರ. ಪತ್ರ ೦೧ ನ್ನು ಬರೆದುಕೊಟ್ಟ ಹೊರತ್ಯಾಗ್ಯೂ ಭೂ-ನ್ಯಾಯಮಂಡಳಿಯ ಮುಂದೆ ಸಲ್ಲಿಸಿದ್ದ ಅರ್ಜಿಯಲ್ಲಿ (ವಾ. ಪ್ರ. ಪತ್ರ ೦೧ ನ್ನು ಬರೆದು ಕೊಟ್ಟನಂತರ) ತಾವು ಮಾಲೀಕರೆಂದು ಅಹವಾಲು

ಮಾಡಲೇ ಇಲ್ಲ, ದಾವಾ ಜಮೀನುಗಳ ಮಾಲೀಕರು ಎದುರಿಗಳು ಎಂದು ಒಪ್ಪಿಕೊಂಡಿದ್ದರು. ವಾಸ್ತವವಾಗಿ, ತಾವು ಎದುರಿಗಳ ಬಾಡಿಗೆದಾರರು ಎಂಬ ಅಹವಾಲು

ಮೇಲ್ಮನವಿದಾರರದಾಗಿತ್ತು. ವಾ. ಪ್ರ. ಪತ್ರ-೦೧ ಕೇವಲ ನಾಮ ಮಾತ್ರದ ದಾಖಲೆಯಾಗಿದ್ದರೆ , ವಾಸ್ತವವಾಗಿ, ಭೂ-ನ್ಯಾಯಮಂಡಳಿಯ ಮುಂದೆ ಅಂತಹ ಅಹವಾಲು ಮಂಡಿಸಲು ಮೇಲ್ಮನವಿದಾರರಿಗೆ ಯಾವುದೇ ಕಾರಣವಿರಲಿಲ್ಲವೆಂದು ಉಚ್ಚ ನ್ಯಾಯಾಲಯ ನಿರ್ಧರಿಸಿದೆ. ಎದುರಿಗಳನ್ನು ಖಾತೆದಾರರು ಎಂದು ಪರಿಗಣಿಸಿರುವ ಕಂದಾಯ ದಾಖಲೆಗಳಾದ ವಾ. ಪ್ರ. ಪತ್ರ-೦೪ ಮತ್ತು ೦೫ ಈ ಇತರೆ ಪುರಾವೆಗಳನ್ನೂ ಸಹ ವಿಚಾರಣಾ ನ್ಯಾಯಾಲಯ ಪರಿಗಣಿಸಿದೆಯೆಂದು ಉಚ್ಚ ನ್ಯಾಯಾಲಯ ಗಮನಿಸಿದೆ. ವಾ. ಪ್ರ. ಪತ್ರ-೦೧ ಕೇವಲ ನಾಮ ಮಾತ್ರದ ಕ್ರಯ ಪತ್ರವಾಗಿದ್ದರೆ, ಕಂದಾಯ ಅಧಿಕಾರಿಗಳು ದಾಖಲೆಗಳಲ್ಲಿ ಜಮೀನುಗಳ ಮಾಲಿಕತ್ವ, ಮೇಲ್ಮನವಿದಾರರ ಹೆಸರಿನ ಬದಲಿಗೆ ಎದುರಾಳಿಗಳ ಹೆಸರಿಗೆ ಬರುವಂತೆ ಬದಲಾವಣೆ ಮಾಡಲು ಎದುರಿದಾರರು ಅನುಮತಿಸುತ್ತಿರಲಿಲ್ಲವೆಂದು ಉಚ್ಚ ನ್ಯಾಯಾಲಯ ಕಾರಣಿಸಿದೆ.

ಪಕ್ಷಕಾರರ ಪ್ರತಿಪಾದನೆಗಳು

೦೯. ಮೊದಲನೇ ಮೇಲ್ಮನವಿಯ ಜಯಪತ್ರಕ್ಕೆ ಹಸ್ತಕ್ಷೇಪ ಮಾಡುವಲ್ಲಿ ಉಚ್ಚ ನ್ಯಾಯಾಲಯ ತಪ್ಪೆಸಗಿದೆಯೆಂದು ಮೇಲ್ಮನವಿದಾರರ ಪರ ಒತ್ತಾಯಪೂರಕವಾಗಿ ಮಂಡಿಸಲಾಯಿತು.

ನಾಗರೀಕ ಸಂಹಿತೆ ಪ್ರಕರಣ ೧೦೦ (ಸಿ. ಪಿ. ಸಿ.) ರತ್ತ ಗಮನಸೆಳೆಯುತ್ತಾ ಕಾನೂನಿನ ಗಣನೀಯ ಅಂಶಗಳನ್ನು ಪರಿಶೀಲಿಸಲು ಮಾತ್ರ ಎರಡನೇ ಮೇಲ್ಮನವಿಯಲ್ಲಿ ಉಚ್ಚ ನ್ಯಾಯಾಲಯದ ವ್ಯಾಪ್ತಿ ಸಿಮಿತವಾಗಿದೆ; ಈ ಪ್ರಕರಣದಲ್ಲಿ , ಸಾಕ್ಷ್ಯದ ವಿಶ್ಲೇಶಣೆಗೆ ಮುಂದುವರೆದ ನ್ಯಾಯಾಲಯ ಮತ್ತು ಮೊದಲನೇ ಮೇಲ್ಮನವಿ ನ್ಯಾಯಾಲಯದ ಅಭಿಪ್ರಾಯಗಳಿಗೆ ಒಪ್ಪದೆ, ಇದು ಸಂಗತಿಗಳ ಅಂತಿಮ ನ್ಯಾಯಾಲಯ ಆಗಿದೆ ಎಂದು ವಿನಂತಿಸಲಾಯಿತು. ಇದಲ್ಲದೆ, ದಾಖಲೆಗಳ ಪರೀಶೀಲನೆ ನಿರ್ದಿಷ್ಟವಾಗಿ ಪ್ರ. ಪ್ರ. ಪತ್ರ ೦೩ ಇಡಿಯಾಗಿ ವಾಸ್ತವಿಕ ಅಂಶವಾಗಿರುವುದನ್ನು ಯಾವುದೇ ಕಲ್ಪನೆಯಿಂದಲೂಲ ಕಾನೂನಿನ ಅಂಶವೆಂದು ಪರಿಗಣಿಸಲಾಗದು , ಅದು ಕಾನೂನಿನ ಪ್ರಶ್ನೆಯೂ ಅಲ್ಲ.

೧೦. ಕಾನೂನು ಮತ್ತು ಕಡತದ ಮೇಲಿನ ಸಾಕ್ಷ್ಯಕ್ಕೆ ಅನುಗುಣವಾಗಿರುವ ವಿಚಾರಣಾ ನ್ಯಾಯಾಲಯದ ತೀರ್ಪನ್ನು ಉಚ್ಚ ನ್ಯಾಯಾಲಯ ಅನುಮೋಧಿಸಿದೆಯಾಗಿ ಪ್ರಶ್ನಿತ ತೀರ್ಪಿಗೆ

ಹಸ್ತ ಕ್ಷೇಪ ಮಾಡಬಾರದೆಂದು ಎದುರಾಳಿಪರ ವಕೀಲರು ಒತ್ತಾಯಿಸಿ ವಿನಂತಿಸಿದರು. ಹಾಜರಿ ಪಡಿಸಿದ ಸಾಕ್ಷ್ಯವನ್ನು ಪರಿಗಣಿಸಿದ ವಿಚಾರಣಾ ನ್ಯಾಯಾಲಯ ಪ್ರ. ಪ್ರ. ಪತ್ರ ೦೩ ರಬಗ್ಗೆ ಜಮೀನಿನ ವಿವರಣೆ ಇಲ್ಲದಿರುವುದು ಅಥವಾ ಅದೇ ರೀತಿಯ ಇನ್ನಿತರೇ ವಿವರಣೆಗಳು ಹಲವು ಮುಖ್ಯ ಅಂಶಗಳನ್ನು ವಿಚಾರಣಾ ನ್ಯಾಯಾಲಯ ಅಥವಾ ಬಡ್ಡಿ ಪಾವತಿ ಬಗ್ಗೆ ಯಾವುದೇ ಉಲ್ಲೇಖ, ಇವೆಲ್ಲವೂ ಅನುಮಾನಕ್ಕೆ ಕಾರಣವಾಗುತ್ತವೆ ಎಂದು ಮಂಡಿಸಿದರು. ಇದಲ್ಲದೆ, ಮಾರಾಟಕ್ಕೆ ಎಂದು ಹೇಳಲಾಗುವ ಕರಾರು (ಪ್ರ. ಪ್ರ. ಪತ್ರ ೦೩) ಕಡತದ ಮೇಲಿನ ಇತರೇ ಪುರಾವೆಯಿಂದ ವ್ಯತಿರಿಕ್ತವಾಗಿದೆ.

ವಿಶ್ಲೇಷಣೆ ಮತ್ತು ತೀರ್ಮಾನಗಳು:

೧೧. ನೋಂದಾಯಿತ ವಾದಿ ಪ್ರಧರ್ಶಿತ ಪತ್ರ-೦೧ ರ ಆಧಾರದಮೇಲೆ ಮೊದಲನೇ ದಾವೆಯಲ್ಲಿನ ಪ್ರತಿವಾದಿ ಸ್ವಾದೀನ ಕೋರಿದ್ದಾಗಿ ಮೇಲಿನ ಸಮಾಲೋಚನೆಯಿಂದ ಸ್ಪಷ್ಟವಾಗುತ್ತದೆ. ಈ ದಸ್ತಾವೇಜನ್ನು ಅಲ್ಲಗಳೆದಿಲ್ಲ. ಪ್ರತಿಸ್ಪರ್ಧಿ ಪ್ರಕರಣವನ್ನು ರಚಿಸಿದ ಹಾಗೆಯೇ ವಾದಿ ಪ್ರಧರ್ಶಿತ ಪತ್ರ-೦೧ ನಾಮ ಮಾತ್ರವಾದುದ್ದು ಮತ್ತು ವಾಸ್ತವವಾಗಿ ಭದ್ರತೆಗೆಂಬ ಅಹವಾಲು ಎರಡನೇ ದಾವೆಯಲ್ಲಿ ಮೇಲ್ಮನವಿದಾರರ ರಕ್ಷಣಾ ನಿಲುವಾಗಿತ್ತು; ೯೦೦೦ ಸಾವಿರ ರೂಗಳನ್ನು ಸ್ವೀಕರಿಸಿದ ನಂತರ ಹಿಂತಿಗಿಸಬೇಕಾಗಿದ್ದ ದಾವಾ ಸ್ವತ್ತನ್ನು ವಸ್ತುತ: ಎದುರಾಳಿಗೆ ವರ್ಗಾಯಿಸಲಾಗಿದೆಯೆಂದೂ ಸಹ ಮೇಲ್ಮನವಿದಾರರು ಪ್ರತಿಪಾದಿಸಿದ್ದರು. ಸ್ವಾದೀನದ ಹಕ್ಕು ಕೋರಿ ಮೇಲ್ಮನವಿದಾರರು ಭೂ ಸುಧಾರಣಾ ನ್ಯಾಯಮಂಡಳಿ ಗೆ ಅರ್ಜಿ ಸಲ್ಲಿಸಿದ್ದು ಮತ್ತು ಕರ್ನಾಟಕ ಭೂ ಸುಧಾರಣೆ ಕಾಯಿಧೆಯಡಿ ಸ್ವಾದೀನದ ಹಕ್ಕು ಅವರಿಗೆ ಪ್ರಾಪ್ತವಾಗಿತ್ತೆಂಬುದು ದಾಖಲೆಯ ವಿಷಯ. ಭೂ ಸುಧಾರಣಾ ನ್ಯಾಯಮಂಡಳಿಯ ಆಧೇಶದಮೇರೆಗೆ ಎದುರಾಳಿಯನ್ನು ಹೊರಹಾಕಲಾಯಿತು. ಭೂ ಸುಧಾರಣಾ ನ್ಯಾಯಮಂಡಳಿಯ ಆಧೇಶವನ್ನು ಉಚ್ಚನ್ಯಾಯಾಲಯ ತಳ್ಳಿಹಾಕಿ ಮತ್ತೊಮ್ಮೆ ಮರುಪರಿಶೀಲನೆಗೆಂದು ಮರಳಿಕಳುಹಿಸಿತ್ತು. ಎರಡನೇ ಸುತ್ತಿನಲ್ಲಿ, ಮಂಡಳಿ ಪಕ್ಷಕಾರರನ್ನು ದಿವಾಣಿ ನ್ಯಾಯಾಲಯಕ್ಕೆ ಕಳುಹಿಸಿತು.ಈ ಸಂದರ್ಭಗಳಲ್ಲಿ ಎರಡು ದಾವೆಗಳನ್ನು ದಾಖಲಿಸಲಾಯಿತು.

೧೨. ವಿಚಾರಣಾ ನ್ಯಾಯಾಲಯ ಮೇಲ್ಮನವಿದಾರರ ಪ್ರತಿಪಾದನೆಯನ್ನು ತಿರಸ್ಕರಿಸಿ, ಮಾರಾಟಕ್ಕೆ ಕರಾರನ್ನು (ಪ್ರ. ಪ. ಪತ್ರ ೦೩)ನ್ನು ನಂಬದೇ , ದಾವೆಯನ್ನು ಪುರಸ್ಕರಿಸಿ ಜಯಪತ್ರ ಹೊರಡಿಸಿತು. ಅದರ ನಿರ್ಣಯಗಳು ಹಲವು ಕಾರಣಗಳನ್ನು ಆಧರಿಸಿವೆ. ಈಗಾಗಲೇ ಗಮನಿಸಿದಂತೆ, ಮೇಲ್ಮನವಿದಾರರ ನಿಲುವಿನಂತೆ ಪ್ರ. ಪ. ಪತ್ರ ೦೩ ರಲ್ಲಿನ ದಸ್ತಾವೇಜು ದಾವಾಸ್ವತ್ತಿನ ವಿವರಗಳನ್ನಾಗಲೀ ಅಥವಾ ಯಾವುದೇ ಬಡ್ಡಿಯ ಪಾವತಿಯನ್ನಾಗಲೀ ಸಹ ಅದು ತಿಳಿಸುವುದಿಲ್ಲ. ಇದಲ್ಲದೆ, ಎದುರಾಳಿ ಮಾಲೀಕರೆಂದು ಮತ್ತು ಎದುರಾಗಳು ಮಾಲೀಕರೆಂದು ಮತ್ತು ಅವರ ಗೇಣಿದಾರರೆಂದು ಮೇಲ್ಮನವಿದಾರರು ಕೇಳಿದ್ದನ್ನ ಸ್ಪಷ್ಟವಾಗಿ ತೋರಿಸುವ ಗೇಣಿಹಕ್ಕಿನ ಅರ್ಜಿರೂಪದ ದಸ್ತಾವೇಜಿನ ಸಾಕ್ಷ್ಯವನ್ನೂ ಸಹಾ ವಿಚಾರಣಾ ನ್ಯಾಯಾಲಯ ಪರಿಶೀಲಿಸಿದೆ. ಕಡೆಯದಾಗಿ, ವಾ. ಪ್ರ. ಪತ್ರ-೦೧(ಒಪ್ಪಿರುವ ಕ್ರಯಪತ್ರ) ಆದ ದಿನದಂದೇ ಆಯಿತೆಂದು ಹೇಳಲಾದ ಪ್ರ. ಪ್ರ. ಪತ್ರ-೦೩ ದಲ್ಲಿನ ಬರಹಗಳು ಒಂದೇ ಆಗಿರಲಿಲ್ಲವೆಂದು ನಿರ್ಣಯಿಸಲಾಯಿತು. ಎದುರಾಳಿ ಪ್ರ.ಪ್ರ.ಪತ್ರ-೦೩ ನ್ನು ಅಲ್ಲಗಳೆದಿದ್ದ. ಪ್ರ. ಪ್ರ. ಪತ್ರ-೦೩ ನ್ನು ವಿಚಾರಣಾ ನ್ಯಾಯಾಲಯ ನಂಬದಿರುವುದು ತಪ್ಪೆಂದು ಮೇಲ್ಮನವಿ ನ್ಯಾಯಾಲಯ ಹೇಳಿತು ಮತ್ತು ಅದು ನೈಜವೆಂದು ಎತ್ತಿ ಹಿಡಿಯಿತು. ಉಚ್ಚ ನ್ಯಾಯಾಲಯ ರೂಪಿಸಿದ ಕಾನೂನಿನ ಗಣನೀಯ ಪ್ರಶ್ನೆ , ಮೊದಲನೇ ಮೇಲ್ಮನವಿ ನ್ಯಾಯಾಲಯ ಪ್ರ. ಪ್ರ. ಪತ್ರ ೦೩ ರ ವ್ಯಾಖ್ಯಾನಕ್ಕೆ ಸಂಬಂಧಿಸಿದ್ದಾಗಿತ್ತು.

೧೩. ಪ್ರ. ಪ್ರ. ಪತ್ರ-೦೩ ನ್ನು ವಿಚಾರಣಾ ನ್ಯಾಯಾಲಯ ತಿರಸ್ಕರಿಸಲು ಮನವೊಲಿಸಿದ ಕಾರಣಗಳನ್ನು ಪ್ರಶ್ನಿತ ತೀರ್ಪು ಮರು ನಿರೂಪಿಸಿದೆ ಮತ್ತು ಅವುಗಳನ್ನು ಅನುಮೋದಿಸಿದೆ. ಅದೇ ಸಮಯದಲ್ಲಿ, ಪ್ರಕರಣಗಳಲ್ಲಿ ಬೇರೂರಿವ ಪ್ರಮುಖ ಸಂಗತಿಗಳನ್ನು ನಿರ್ಲಕ್ಷಿಸಿ ದಸ್ತಾವೇಜುಗಳ ಆಧಾರದಮೇಲೆ ಪ್ರ. ಪ್ರ. ಪತ್ರ-೦೩ ನ್ನು ತಿರಸ್ಕರಿಸಲು ಮತ್ತು ಸ್ವಾದೀನಕ್ಕೆ ತೀರ್ಪು ಕೊಟ್ಟ ವಿಚಾರಣಾ ನ್ಯಾಯಾಲಯದ ಕ್ರಮದಲ್ಲಿ ಉಚ್ಚ ನ್ಯಾಯಾಲಯ ತಪ್ಪನ್ನು ಕಂಡಿತು. ಮೇಲ್ಮನವಿದಾರರ ಧ್ಯೇಯಗೀತೆ ಏನೆಂದರೆ, ಶುದ್ಧ ಸಂಗತಿಗಳ ಮೇಲೆ ಎಂದು ಹೇಳಲಾದ ಅಭಿಪ್ರಾಯಕ್ಕೆ ಎರಡನೇ ಮೇಲ್ಮನವಿಯಲ್ಲಿ ಉಚ್ಚ ನ್ಯಾಯಾಲಯವು ಹಸ್ತಕ್ಷೇಪ ಮಾಡಬೀರದಾಗಿತ್ತು. ಪ್ರ. ಪ್ರ. ಪತ್ರ-೦೩ ನ್ನು ಅವಲೋಕಿಸುವುದನ್ನು ಕಾನೂನಿನ ಗಣನೀಯ ಪ್ರಶ್ನೆಯೆಂದು ಕರೆಯಲಾಗದು ಬದಲಿಗೆ, ಸಂಗತಿಗಳ ಶುದ್ಧಪ್ರಶಂಸೆಯಂತಾಗುತ್ತದೆಯೆಂದು ಮಂಡಿಸಲಾಯಿತು.

೧೪. ನಿಸ್ಸಂದೇಹವಾಗಿ, ಕಲಮು ೧೦೦ ರ ಅಡಿಯಲ್ಲಿ ಉಚ್ಚ ನ್ಯಾಯಾಲಯ ಪಡೆಯುವ ಅಧಿಕಾರ ಅದು ರಚಿಸುವ ಕಾನೂನಿನ ಗಣನೀಯ ಪ್ರಶ್ನೆಯನ್ನು ಆದರಿಸಿದೆ. ಕಾನೂನಿನ ವಿಷಯದಲ್ಲಿ, ಮೊದಲ ಮೇಲ್ಮನವಿ ನ್ಯಾಯಾಲಯಗಳ ತೀರ್ಮಾನಗಳು ಅಂತಿಮವಾಗಿರುತ್ತವೆ ಎಂಬುದು ಸ್ವಯಂ ವೆದ್ಯವಾಗಿದೆ. ಆದಾಗ್ಯೂ, ಕಾನೂನಿನ ಗಣನೀಯ ಪ್ರಶ್ನೆಯಿಲ್ಲದೆ, ಉಚ್ಚ ನ್ಯಾಯಾಲಯಗಳು ಕೆಳ ನ್ಯಾಯಾಲಯದ ತೀರ್ಮಾನಗಳಲ್ಲಿ ಅಥವಾ ಸಂಗತಿಗಳಮೇಲಿನ ಸಮವರ್ತಿ ತೀರ್ಮಾನಗಳಲ್ಲಿ ಹಸ್ತಕ್ಷೇಪ ಮಾಡಲು ಸಾಧ್ಯವಿಲ್ಲವೆಂಬ ನಿಯಮ ಎರಡು ಪ್ರಮುಖ ಎಚ್ಚರಿಕೆಗಳಿಗೆ ಒಳಪಟ್ಟಿಕುತ್ತದೆ.

ಮೊದಲನೆಯದಾಗಿ, ಸಂಗತಿ ಮೇಲಿನ ತೀರ್ಮಾನಗಳು ಸ್ಪಷ್ಟವಾಗಿ ವಿಕೃತವಾಗಿದ್ದರೆ ಅಥವಾ ನ್ಯಾಯಾಲಯದ ಆತ್ಮ ಸಾಕ್ಷಿಯನ್ನು ಕೆರಳಿಸಿದರೆ, ಬೇರೆ ರೀತಿಯಲ್ಲಿ ಹೇಳುವುದಾದರೆ, ದಾಖಲೆಗಳಲ್ಲಿನ ನಿರ್ಧಿಷ್ಟ ಸಂಗತಿಗಳಿಂದಲೇ ಹಸ್ತಕ್ಷೇಪ ನ್ಯಾಯಸಮ್ಮತ ವಾದುದು ಎಂಬ ತರ್ಕವಾಗುತ್ತದೆ ; ಇನ್ನೊಂದು, ಕಲಂ ೧೦೩ ನಾಗರೀಕ ಪ್ರಕ್ರಿಯಾ ಸಂಹಿತೆ ಯಲ್ಲಿ ಹೇಳಿರುವ ಸೀಮಿತ ಸಂದರ್ಭಗಳಲ್ಲಿ ಮಾತ್ರ ಸಂಗತಿಗಳ ಮೇಲಿನ ಅಭಿಪ್ರಾಯಗಳನ್ನು ಪರೀಶೀಲನೆಗೆ ಆಹ್ವಾನಿಸಬಹದು ಮತ್ತು ವ್ಯತ್ಯಾಸಗೊಳಿಸಬಹುದು.

೧೫. ನಾಗರೀಕ ಪ್ರಕ್ರಿಯಾ ಸಂಹಿತೆಯ ಕಲಂ ೧೦೩ ಈ ರೀತಿ ಓದುತ್ತದೆ:

“ ೧೦೩. ಸಂಗತಿಗಳ ವಿವಾದಾಂಶಗಳ ನಿರ್ಧರಣೆಗೆ ಉಚ್ಚ ನ್ಯಾಯಾಲಯದ ಅಧಿಕಾರ .

ಯಾವುದೇ ಎರಡನೇ ಮೇಲ್ಮನವಿಯಲ್ಲಿ , ಉಚ್ಚ ನ್ಯಾಯಾಲಯ, ಮೇಲ್ಮನವಿಯನ್ನು ವೀಲೆಮಾಡಲು ಕಡತದ ಮೇಲಿನ ಪುರಾವೆ ಸಾಕಷ್ಟಿದ್ದರೆ ಯಾವುದೇ ವಿವಾದಾಂಶವನ್ನು ನಿರ್ಧರಿಸಬಹುದು:

(ಕ) ಕೆಳಗಿನ ಮೇಲ್ಮನವಿ ನ್ಯಾಯಾಲಯದಿಂದ ನಿರ್ಧರಿತವಾಗದ ಅಥವಾ ಮೊದಲ ಹಂತದ ನ್ಯಾಯಾಲಯ ಮತ್ತು ಕೆಳಗಿನ ಮೇಲ್ಮನವಿ ನ್ಯಾಯಾಲಯ ಎರಡರಿಂದಲೂ , ಅಥವಾ

(ಖ) ಕಲಂ ೧೦೦ ಉಲ್ಲೇಖಿಸಿರುವಂತಹ ಕಾನೂನಿನ ಪ್ರಶ್ನೆಗಳಿಗೆ ಅಂತಹ ನ್ಯಾಯಾಲಯ ಅಥವಾ ನ್ಯಾಯಾಲಯಗಳಿಂದ ತಪ್ಪಾಗಿ ನಿರ್ಣಯಿಸಲಾಗಿದ್ದರೆ ,”

೧೬. ಮುನಿಸಿಪಲ್ ಕಾರ್ಪೋರೇಷನ್ ಹುಷಿಯಾರಪುರ -ವಿ- ಪಂಜಾಬ್ ರಾಜ್ಯದ ಎಲೆಕ್ಟ್ರಿಸಿಟಿ ಬೋರ್ಡ ಎಂಬ ಹೆಸರಿನಿಂದ ವರದಿಯಾಗಿರುವ ತೀರ್ಪಿನಲ್ಲಿ ಈ ನ್ಯಾಯಾಲಯ ಕೆಳಕಂಡಂತೆ ಹೇಳಿದೆ:

> " ೨೬. ಹೀಗಾಗಿ, ನಾಗರೀಕ ಪ್ರಕ್ರಿಯಾ ಸಂಹಿತೆ ಕಲಂ ೧೦೩ ರಿಂದ ವ್ಯಕ್ಯವಾಗುವುದೇನೆಂದರೆ, ಅದು ನಾಗರೀಕ ಪ್ರಕ್ರಿಯಾ ಸಂಹಿತೆ ಕಲಂ ೧೦೦ ಹೊರತಾಜುದಲ್ಲ ಅಥವಾ ಅದನ್ನು ಬದಲಿಸುವ ಅರ್ಥಕ್ಕೂ ಅಲ್ಲ ಬದಲಿಗೆ, ಅದೇ ಉದ್ದೇಶವನ್ನು ಪೂರೈಸುತ್ತದೆ ಎಂಬುದು ಸ್ಪಷ್ಟವಾಗಿದೆ. ನಾಗರೀಕ ಪ್ರಕ್ರಿಯಾ ಸಂಹಿತೆ ಕಲಂ ೧೦೩ ಕಾರ್ಯರೂಪಗೊಳಿಸುವ ಸಮಯದಲ್ಲೇ, ಅಂತಹ ಅಧಿಕಾರವನ್ನು ತಾನು ಚಲಾಯಿಸಬೇಕೆಂಬ ಬಗ್ಗೆ ಉಚ್ಚ ನ್ಯಾಯಾಲಯವು ಕಾರಣವನ್ನು ಅಭಿಲೇಖಿಸಬೇಕು ಏಕೆಂದರೆ, ಸಂಗತಿಗಳ ಮೇಲೆ ದಾಖಲಿಸಿದ ಕೆಳಗಿನ ನ್ಯಾಯಾಲಯ(ಗಳ) ದ ಅಭಿಪ್ರಾಯ(ಗಳು) ವಿಕೃತತೆಯ ಕಾರಣದಿಂದ ಕ್ಷೀಣಿಸಿರುವುದಾಗಿ ಅದು ಕಂಡುಕೊಳ್ಳುತ್ತದೆ. ಅದಕ್ಕಿಂತ ಹೆಚ್ಚಾಗಿ, ಪ್ರಕರಣಗಳಲ್ಲಿ ಒಳಗೊಂಡಿರುವ ಮೂಲ ಪ್ರಶ್ನೆಯನ್ನು ಕೆಳನ್ಯಾಯಾಲಯಗಳು ನಿರ್ಣಯಿಸದಿದ್ದಾಗ, ಅಂತಹ ಅಧಿಕಾರವನ್ನು ಅಸಾಧಾರಣ ಸಂದರ್ಭಗಳಲ್ಲಿ ಮತ್ತು ಜಾಗರೂಕತೆಯಿಂದ ಮಾತ್ರ ಚಲಾಯಿಸಬಹುದು.
>
> ೨೭. ಕೆಳಗಿನ ನ್ಯಾಯಾಲಯಗಳು ಅಭಿಲೇಖಿಸಿದ ಸಂಗತಿಗಳ ಮೇಲಿನ ಅಭಿಪ್ರಾಯಗಳು ಸಂಬಂಧಿತ ಪುರಾವೆಯನ್ನು ಪರಿಗಣಿಸದಿರುವುದು ಅಥವಾ ವಿಷಯಕ್ಕೆ ತಪ್ಪಾದ ವಿಧಾನವನ್ನು ಹೊಂದಿರುವುದರಿಂದ ಅಂದರೆ, ಸಂಗತಿ ಮೇಲಿನ ಅಭಿಪ್ರಾಯಗಳು ವ್ಯತಿರಿಕ್ತವಾಗಿವೆ ಎಂದು ನ್ಯಾಯಾಲಯಕ್ಕೆ ಮನವರಿಕೆಯಾದರೆ ಸಂಗತಿ ಮೇಲೂಸಹ ಎರಡನೇ ಮೇಲ್ಮನವಿಯನ್ನು ಸ್ವೀಕರಿಸಲು ಯಾವುದೇ ನಿಷೇದವಿಲ್ಲ. ಅಂದರೆ, ಉಚ್ಚ ನ್ಯಾಯಾಲಯವು ತನ್ನ ವ್ಯಕ್ತಿನಿಷ್ಠ ತೃಪ್ತಿಯನ್ನು ಕೆಳ ನ್ಯಾಯಾಲಯಗಳ ಬದಲಿಗೆ ಬದಲಿಸುವ ಮೂಲಕ ಸಂಗತಿಗಳ ಸಮವರ್ತಿ ಅಭಿಪ್ರಾಯಗಳಲ್ಲಿ ವಾಡಿಕೆಯ ಮತ್ತು ಪ್ರಾಸಂಗಿಕ ರೀತಿಯಲ್ಲಿ ಹಸ್ತಕ್ಷೇಪ ಮಾಡಲು ಸಾಧ್ಯವಿಲ್ಲ. [ಜಗದೀಶ್ ಸಿಂಗ್ -ವಿ- ನಟ್ಟುಸಿಂಗ್ (೧೯೯೨) ೧ ಎ ಸ್ಸ್ ಸಿ ೬೪೭]:

ಕರ್ನಾಟಕ ವಕ್ಫ್ ಮಂಡಳಿ -ವಿ- ಇಸ್ಮಾಯಿಲ್ ಮದ್ರಿಸ್ -ಉನ್-ನಿಸ್ವಾನ್[(೧೯೯೯)೬ ಎ ಸ್ಸ್ ಸಿ ೩೪೩] ಮತ್ತು ದಿನೇಶ್ ಕುಮಾರ್ -ವಿ-ಯೂಸೂಫ್ ಆಲಿ [(೨೦೧೦) ೧೨ ಎ ಸ್ಸ್ ಸಿ ೭೪೦] .

೨೮. ಮುಖ್ಯವಾದ ವಿಷಯವನ್ನು ನಿರ್ಲಕ್ಷಿಸುವ ಅಥವಾ ಹೊರಗಿಡುವ ಅಥವಾ ಅಪ್ರಸ್ತುತ ವಿಷಯವನ್ನು ಪರಿಗಣನೆಗೆ ತೆಗೆದುಕೊಳ್ಳುವ ಮೂಲಕ ಸಂಗತಿಗಳ ಮೇಲೆ ಅಭಿಪ್ರಾಯಕ್ಕೆ ಬಂದರೆ ಅಥವಾ ಆ ಅಭಿಪ್ರಾಯ ತರ್ಕವನ್ನು ತುಂಬಾ ಅತಿರೇಕವಾಗಿ ದಿಕ್ಕರಿಸಿದರೆ, ಅದು ವಿವೇಚನಾರಹಿತವಾದುದು ಎಂಬ ಆಪಾದನೆಯನ್ನು ಉಂಟುಮಾಡುವ ಅತಾರ್ಕಿಕತೆಯ ದುರ್ಗುಣ, ಆಗ ಆ ಅಭಿಪ್ರಾಯಗಳು ಕಾನೂನಿನ ದೃಷ್ಟಿಯಲ್ಲಿ ದುರ್ಬಲಗೊಳ್ಳುತ್ತವೆ. ನ್ಯಾಯಾಲಯದ ಅಭಿಪ್ರಾಯಗಳು ಸಂಪೂರ್ಣವಾಗಿ ವಿಶ್ವಾಸರ್ಹವಲ್ಲದ ಯಾವುದೇ ಸಾಕ್ಷ್ಯ ಅಥವಾ ಆ ಸಾಕ್ಷ ಕಾರ್ಯವಿಧಾನದ ಅಕ್ರಮಗಳಿಂದ ಬಳಲುತ್ತಿದ್ದರೆ ಅಥವಾ ವಿವೇಚನೆಯುಳ್ಳ ಯಾವುದೇ ವ್ಯಕ್ತಿ ಅಂತಹ ಅಭಿಪ್ರಾಯಗಳಿಗೆ ಬರದೇ ಇರುವಂತಹದಾಗಿದ್ದರೆ, ಆಗ ಅಭಿಪ್ರಾಯಗಳು ವ್ಯತಿರಿಕ್ತವೆಂದು ಹೇಳಬಹುದು.

ಇದಲ್ಲದೆ, ಅಭಿಪ್ರಾಯಗಳು ನ್ಯಾಯಾಲಯದ ಅಸಂಬದ್ಧ ಅಭಿಪ್ರಾಯಗಳಾಗಿದ್ದರೆ ಅಥವಾ ಕಲ್ಪನೆ ಮತ್ತು ಊಹೆಗಳನ್ನು ಆದರಿಸಿದ್ದರೆ, ಮನಸ್ಸು ಕೊಡದೆ ಹೆಚ್ಚುವರಿ ದೌರ್ಬಲ್ಯದಿಂದ ತೀರ್ಪು ಬಳಲುತ್ತದೆ ಮತ್ತು ಆದಾಗಿ ಕ್ಷೀಣವಾಗುತ್ತದೆ. ಭಾರತ ಮಾತಾ -ವಿ-ವಿಜಯ ರಂಗನಾಥನ್[(೨೦೧೦) ೧೧ ಎ ಸ್ಸಿ ಸಿ ೪೮೩]”

೧೭. ಇದೇ ನ್ಯಾಯಾಲಯ, ನಾರಾಯಣ್ ಸೀತಾರಾಮಿಜಿ ಬದ್ಯಾಕ್(ಮೃತ) ವಾರಸುದಾರಿಂದ -ವಿ- ಬಿಸರಾಮ್ ಮತ್ತು ಇತರರು , ಪ್ರಕರಣದ ಇತ್ತೀಚಿನ ತೀರ್ಪಿನಲ್ಲಿ , ಭಾರತ ದಂಡ ಸಂಹಿತೆ ಪ್ರಕರಣ ೧೦೩ (? ನಾಗರೀಕ ಪ್ರಕ್ರಿಯಾ ಸಂಹಿತೆ ಕಲಂ ೧೦೩) ರಡಿಯಲ್ಲಿ ಸಂಗತಿಗಳ ಮೇಲಿನ ವಿವಾದಂಶಗಳನ್ನು ಪ್ರಶಂಸಿಸುವ ಉಚ್ಚ ನ್ಯಾಯಾಲಯಗಳ ಅಧಿಕಾರವನ್ನು ಈ ಕೆಳಗಿನಂತೆ ಅಭಿಪ್ರಯಿಸಿದೆ:

> “೧೧. ಈ ಕಲಮಿನ ಒಂದು ಸಾದಾ ಓದುವಿಕೆ ಸ್ಪಷ್ಟವಾಗಿ ಸೂಚಿಸುವುದೇನೆಂದರೆ, ಅದರ ಮುಂದಿರುವ ಕಡತದಲ್ಲಿ ಅಗತ್ಯ ಸಾಕ್ಷ್ಯ ಲಭ್ಯವಿದ್ದಾಗ ಸಂಗತಿಗಳ ವಿವಾದವನ್ನು ನಿರ್ಣಯಿಸಲು ಅದು ಉಚ್ಚ ನ್ಯಾಯಾಲಯಕ್ಕೆ ಅವಕಾಶ ನೀಡುತ್ತದೆ. ಮೊದಲಿಗೆ, ಮೇಲ್ಮನವಿಯ ವೀಲೆಗೆ ಅವಶ್ಯವಿದ್ದ ವಿವಾದಾಂಶವನ್ನು ಕೆಳ ಮೇಲ್ಮನವಿ ನ್ಯಾಯಾಲಯ ಅಥವಾ ಎರಡೂ ಕೆಳ ನ್ಯಾಯಾಲಯ ನಿರ್ಣಯಿಸದಿದ್ದಾಗ; ಮತ್ತು ಎರಡನೆಯದು, ಸಂಗತಿಗಳ ವಿವಾದಾಂಶವನ್ನು ನಾಗರೀಕ ಪ್ರಕ್ರಿಯಾ ಸಂಹಿತೆ ಕಲಂ ೧೦೦ ರಡಿ ಕಾನೂನಿನ ಪ್ರಶ್ನೆಯ ಆದಾರದಮೇಲೆ ನ್ಯಾಯಾಲಯ(ಳು) ತಪ್ಪಾಗಿ ನಿರ್ಣಯಿಸಿದ್ದಾಗ..”

೧೮. ಪ್ರಸ್ತುತ ಪ್ರಕರಣದಲ್ಲಿ, ಈ ನ್ಯಾಯಾಲಯದ ಅಭಿಪ್ರಾಯದಂತೆ, ಮೊದಲ ಮೇಲ್ಮನವಿಯ ತೀರ್ಪಿಗೆ ಏಕೆ ಹಸ್ತಕ್ಷೇಪ ಅಗತ್ಯವಿತ್ತು ಎಂಬುದಕ್ಕೆ ಉತ್ತಮ ಮತ್ತು ಮನವರಿಕೆಯಾಗುವ ಕಾರಣಗಳನ್ನು ಉಚ್ಚ ನ್ಯಾಯಾಲಯವು ದಾಖಲಿಸಿದೆ. ಇವುಗಳು ಸಂಪೂರ್ಣವಾಗಿ ದಾಖಲೆಯಲ್ಲಿರುವ ಪಕ್ಷಕಾರರು ನೀಡಿದ ಸಾಕ್ಷ್ಯವನ್ನು ಆಧರಿಸಿವೆ. ವಿಚಾರಣಾ ನ್ಯಾಯಾಲಯದ ಮುಂದೆ ಹಾಜರಿಸಿದ್ದ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಅದು ಕಡೆಗಣಿಸಿದ್ದ ಆಧಾರದಮೇಲೆ ಪ್ರ. ಪ್ರ. ಪತ್ರ ೦೩ ರ ಜಾರಿಯನ್ನು ನಿರಾಕರಿಸಿತ್ತು . ಇಂತಹ ಸಂದರ್ಭಗಳಲ್ಲಿ, ನೋಂದಾಯಿತ ಕ್ರಯಪತ್ರ ಕೇವಲ ನೆಪಮಾತ್ರದೆಂದು ನಿರೂಪಿಸುವ ಹೊಣೆ ಮೇಲ್ಮನವಿದಾರರ ಮೇಲಿತ್ತು. ವಿಚಾರಣಾ ನ್ಯಾಯಾಲಯದ ಅಭಿಪ್ರಾಯಗಳನ್ನು ಸರಿಯಾಗಿ ಗಮನಿಸಿದ ಉಚ್ಚ ನ್ಯಾಯಾಲಯವು , ಮೇಲ್ಮನವಿದಾರರ ಮನವಿಗಳನ್ನು ಏಕೆ ಸ್ವೀಕರಿಸಲಾಗಿಲ್ಲ ಎಂಬುದಕ್ಕೆ ಐದು ದೃಡವಾದ ಕಾರಣಗಳನ್ನು ದಾಖಲಿಸಿದೆ . ೯೦೦೦/- ರೂಗಳ ಮರುಪಾವತಿ ಬಗೆಗಿನ ಸಾಕ್ಷ್ಯ ಹೇಳಿಕೆ ಯಾವುದೇ ಮುಖ್ಯ ವಿವರಗಳ ಸಂಗತಿಗಳ ಹೊರತಾಗಿಯೂ ಬಡ್ಡಿಯ ಪಾವ್ತಿ ಸಹ ನಿಬಂಧನೆಗಳಿಗೆ ವಿರುದ್ಧವಾಗಿತ್ತಲ್ಲದೆ ಆ ಬಗ್ಗೆ ಯಾವುದೇ ಪ್ರತಿಪಾದನೆ ಕೂಡ ಇರಲಿಲ್ಲ. ಇದಲ್ಲದೆ, ಮಾರಾಟ ಪತ್ರದ ನಂತರ ಮಾಡಿದ ಅಧಿ ಭೋಗದ ಹಕ್ಕುಗಳಿಗಾಗಿ ಮೇಲ್ಮನವಿದಾರರ ಅರ್ಜಿ ಮತ್ತು ಮಾರಾಟಕ್ಕೆಂದು ಹೇಳಲಾದ ಒಪ್ಪಂದ ಪತ್ರದಲ್ಲಿ ಮೇಲ್ಮನವಿದಾರರು ಎದುರಾಳಿಗಳನ್ನು ಗೇಣಿದಾರರೆಂದು ಹೇಳಲಾಗಿದೆ. ಅಂತಿಮವಾಗಿ , ಭೂ ನ್ಯಾಯಾಧಿಕರಣದ ಆಧೇಶವನ್ನು ತಳ್ಳಿಹಾಕಿ ಹಿಂದಕ್ಕೆ ಕಳುಹಿಸಿದ್ದು; ಆ ನಂತರ, ಭೂ ನ್ಯಾಯಾಧಿಕರಣವು ವಿಷಯದಲ್ಲಿನ ಸಂಗತಿಯನ್ನು ನಿರ್ಣಯಿಸಲು ತಾನು ಅಧಿಕಾರ ಹೊಂದಿಲ್ಲವೆಂಬ

ಅಭಿಪ್ರಾಯಿಸಿ ಮತ್ತು ಆ ರೀತಿ ಮಾಡಲು ವಿಚಾರಣಾ ನ್ಯಾಯಾಲಯಕ್ಕೆ ತೆರೆದಿಟ್ಟಿತು. ಈ ಪ್ರಮುಖ ಅಂಶಗಳನ್ನು ಪ್ರಶಂಸಿಸಲಾಗಿಲ್ಲವೆಂದು ತೋರುತ್ತದೆ ಮತ್ತು ಅವುಗಳ ಪ್ರಾಮುಖ್ಯತೆಯನ್ನು ಕಡೆಗಣಿಸಲ್ಪಟ್ಟಿದೆ. ಪರಿಣಾಮವಾಗಿ, ಮೊದಲ ಮೇಲ್ಮನವಿಯ ನ್ಯಾಯಾಲಯ ಪ್ರಮುಖ ಸಾಕ್ಷ್ಯವನ್ನು ಮತ್ತು ದಾಖಲೆಯನ್ನು ಅದರ ನೈಜ ದೃಷ್ಟಿಕೋನದಿಂದ ಪರಿಗಣಿಸುವಲ್ಲಿ ತಪ್ಪೆಸಗಿದೆ ಮತ್ತು ವಿಚಾರಣಾ ನ್ಯಾಯಾಲಯದ ತೀರ್ಪನ್ನು ನಿರ್ಥಕಗೊಳಿಸಿತು. ಇದಲ್ಲದೆ, ಉಚ್ಚ ನ್ಯಾಯಾಲಯವು ಎರಡನೇ ಮೇಲ್ಮನವಿಯಲ್ಲಿ ಸಾಕ್ಷ್ಯದ ಆದಾರದಮೇಲೆ ದಾಖಲೆಗಳನ್ನು ಪರಿಶೀಲಸಲು ಮುಂದಾಯಿತು ಮತ್ತು ಕಲಂ ೧೦೩ ರಡಿ ಎಂಬಂತೆ ಅಭಿಪ್ರಾಯಗಳನ್ನು ಸರಿಪಡಿಸಿತು. ಮೇಲ್ಮನವಿದಾರರ ವಾದಗಳು ಮೇಲುಗೈ ಸಾಧಿಸಬೇಕಾದರೆ, ಸಂಗತಿಗಳ ಮೇಲಿನ ನಿರ್ಣಯ ಸಂಪೂರ್ಣವಾಗಿ ತಪ್ಪಾದ ಪ್ರಶಂಸೆಯ ಆದಾರದ್ದು ಮತ್ತು ಪ್ರಮುಖ ಸಾಕ್ಷ್ಯವನ್ನು ಕಡೆಗಣಿಸಿರುವುದು ಉಳಿಯುವವದೇ ಮತ್ತು ಪಕ್ಷಕಾರರನ್ನು ಬಂಧಿಸಿದ್ದೇ ಆದಲ್ಲಿ , ಆ ಮೂಲಕ ಅನ್ಯಾಯಕ್ಕೆ ಕಾರಣವಾಗುತ್ತದೆ. ಅಂತಹ ನಿರ್ದಿಷ್ಟ ಕಾರಣಗಳಿಂದಾಗಿಯೇ ಉಚ್ಚ ನ್ಯಾಯಾಲಯಗಳಿಗೆ ನಾಗರೀಕ ಪ್ರಕ್ರಿಯಾ ಸಂಹಿತೆ ಕಲಂ ೧೦೩ ರಡಿ ಸಂಗತಿಗಳ ಮೇಲೆ ಪುನರ್ ಪರಿಶೀಲಿಸುವ ಸೀಮಿತ ಅಧಕಾರವಿದೆ. ಆದಾಗಿ, ಅಂತಹ ಅಧಿಕಾರವನ್ನು ಚಲಾಯಿಸಬಹುದು ಎಂಬುದರಲ್ಲಿ ಸಂದೇಹವಿಲ್ಲ. ಆ ನಿಬಂಧನೆಯನ್ನು ಪ್ರಶ್ನಿತ ತೀರ್ಪು ಸ್ಪಷ್ಟವಾಗಿ ಉಲ್ಲೇಖಿಸುವುದಿಲ್ಲ. ಪ್ರಕರಣದ ಸಂದರ್ಭಗಳಲ್ಲಿ, ಆ ನಿಬಂಧನೆಯ ಬೆಳಕಿನಲ್ಲಿ ಉಚ್ಚ ನ್ಯಾಯಾಲಯವು ಅಧಿಕಾರವನ್ನು ಚಲಾಯಿಸಿದೆ ಎಂಬುದು ಸ್ಪಷ್ಟವಾಗಿದೆ. ಇದಲ್ಲದೆ, ಒಟ್ಟಾರೆ ಸನ್ನಿವೇಶಗಳನ್ನು ಗಮನದಲ್ಲಿಟ್ಟುಕೊಂಡು , ಪ್ರಶ್ನಿತ ತೀರ್ಪಿನಲ್ಲಿನ ವಿಶೇಶ ಅಧಿಕಾರ ವ್ಯಾಪ್ತಿಯ ಬಳಕೆಯಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯವಿಲ್ಲವೆಂದು ನಾವು ಅಭಿಪ್ರಾಯ ಪಟ್ಟಿದ್ದೇವೆ (ಇದು ಅಂತಿಮ ಸುನಾವಣೆಯ ಹಂತದಲ್ಲೂ ಸಹ ಈ ನ್ಯಾಯಾಲಯಕ್ಕೆ ಲಬ್ಯವಿದೆ).

೧೯. ಮೇಲಿನ ಚರ್ಚೆಯಿಂದಾಗಿ, ಮೇಲ್ಮನವಿಗಳಲ್ಲಿ ಯಾವುದೇ ಅರ್ಹತೆ ಇಲ್ಲವೆಂದು ಪರಿಗಣಿಸಲಾಗಿದೆ, ತದನುಸಾರವಾಗಿ ಅವುಗಳನ್ನು ವಜಾಮಾಡಲಾಗಿದೆ. ವೆಚ್ಚಗಳ ಬಗ್ಗೆ ಯಾವುದೇ ಆದೇಶ ಇರುವುದಿಲ್ಲ.

ಮೇಲ್ಮನವಿಗಳು ವಜಾ ಆಗಿವೆ.

ಬಿಬೂತಿ ಭೂಷಣ ಬೋಸ್